ಶ್ರೀ ಬಿ.ಎಸ್. ಯಡಿಯೂರಪ್ಪ,— ಮಾನ್ಯ ಅಧ್ಯಕ್ಷರೇ, ಭತ್ತವನ್ನಾದರೂ ಲೆವಿ ರೂಪದಲ್ಲಿ ತೆಗೆದುಕೊಳ್ಳಲಿ, ಅಕ್ಕಿಯನ್ನಾದರೂ ಲೆವಿ ರೂಪದಲ್ಲಿ ತೆಗೆದುಕೊಳ್ಳಲಿ. ಈ ಸುಗ್ಗಿ ಸಂದರ್ಭದಲ್ಲಿ ಲೆವಿ ರೂಪದಲ್ಲಿ ಕಡಿಮೆ ದರದಲ್ಲಿ ತೆಗೆದುಕೊಳ್ಳುವುದರಿಂದ ಅಲ್ಪಿಮೆಟಾಗಿ ಭತ್ತ ಬೆಳೆದಂಥ ರೈತನ ಮೇಲೆ ಆ ಲುಂಕ್ಸಾನು ಬೀಳುತ್ತದೆ. ಇದನ್ನು ಯಾವುದೇ ಮಿಲ್ ಮಾಲೀಕ ಭರಿಸುವ ಪ್ರಶ್ನೆ ಇಲ್ಲ. ಈ ರೀತಿಯ ಲೆವಿಯ ನೀತಿಯಿಂದ ರೈತ ಬೀದಿ ಪಾಲಾಗುತ್ತಾನೆ. ಅವನಿಗೆ ಸರಿಯಾದ ಬೆಲೆ ಸಿಕುತ್ತಾ ಇಲ್ಲ. ಈ ಲೆವಿಯಿಂದ ಪಸೂಲ್ಮಾಡುವ ಅಕ್ಕಿ ಬೆಲೆಗೂ ಮಾರ್ಕೆಟ್ ಬೆಲೆಗೂ ಸುಮಾರು ೧೫೦ರೂಪಾಯಿಗಳ ವ್ಯತ್ಯಾಸ ಇರುವುದರಿಂದ ರೈತನ ಮೇಲೆ ಅದರ ಕೆಟ್ಟ ಪರಿಣಾಮವಾಗುವುದಿಲ್ಲವೇ? ಇದು ರೈತ ವಿರೋಧಿ ನೀತಿಯಾಗುವುದಿಲ್ಲವೇ, ಇದರಿಂದ ರೈತನ ಶೋಷಣೆಯಾಗುವುದಿಲ್ಲವೇ?

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ, ಲೆವಿ ನೀತಿ ಅಥವಾ ಅದರ ದರವನ್ನು ಕೇಂದ್ರ ಸರ್ಕಾರದವರು ನಿಗದಿ ಮಾಡುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ಕೇಂದ್ರದವರ ಗಮನಕ್ಕೆ ತರುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಅಧ್ಯಕ್ಷರೇ, ರೈತರಿಂದ ಲೆವಿ ತೆಗೆದುಕೊಳ್ಳುವುದು, ಮಿಲ್ಲಿನ ಮಾಲೀಕರಿಂದ ಲೆವಿ ತೆಗೆದುಕೊಳ್ಳುವುದು, ಈ ಎರಡರಿಂದಲೂ ರೈತರ ಮೇಲೆ ಭಾರ ಬೀಳುತ್ತದೆ. ಬಜಾರ್‌ನಲ್ಲಿ, ರೈತ ಬೆಳೆದ ಮಾಲಿಗೆ ಕಡಿಮೆ ಬೆಲೆ ಇರುವುದರಿಂದ ಸರ್ಕಾರ ಅದಕ್ಕಿಂತ ಅರ್ಧದಷ್ಟು ಕಡಿಮೆ ಬೆಲೆಯನ್ನು ಕೊಟ್ಟು, ರೈತರಿಂದ ಲೆವಿ ವಸೂಲಿ ಮಾಡುವುದರಿಂದ ರೈತನಿಗೆ ನ್ಯಾಯವಾಗಿ ಸಿಗಬೇಕಾದ ಬೆಲೆ ಸಿಕ್ಕದಂತೆ ಆಗಿದೆ, ಈ ರೀತಿ ಮಾಡುವುದಕ್ಕೆ ಯಾವುದೇ ಸರ್ಕಾರಕ್ಕೆ ನೈತಿಕ ಹಕ್ಕು ಇಲ್ಲ, ರೈತ ಬೆಳೆದ ಮಾಲಿಗೆ ಯೋಗ್ಯ ಬೆಲೆ ಕೊಡುವಂಥದ್ದನ್ನು ಯಾವ ಸರ್ಕಾರವೂ ಈ ದೇಶದಲ್ಲಿ ಮಾಡಿಲ್ಲ. ಆದ್ದರಿಂದ ಮುಂಕ್ತ ಬಜಾರಿನಲ್ಲಿ ಸರ್ಕಾರದ ಮಾಲನ್ನು ಕೊಂಡು, ಕಡಿಮೆ ದರದಲ್ಲಿ ಹಿಸಿರು ಕಾರ್ಡ್‌ನವರಿಗೆ ಹಂಚಬೇಕು. ರೈತರಿಂದ ಕಡಿಮೆ ಬೆಲೆಗೆ ಕೊಂಡುಕೊಳ್ಳುವುದರಿಂದ ರೈತರ ಶೋಷಣೆಯಾಗುತ್ತದೆ. ಆದ್ದರಿಂದ ಈ ಲೆವಿ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ಎಂದು ಕೇಳಬಯಸುತ್ತೇನೆ?

ಶ್ರೀ ಕೆ.ಜೆ. ಜಾರ್ಜ್.— ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದು ಕೇಂದ್ರ ಸರ್ಕಾರದವರ ನೀತಿ ಮತ್ತು ದರವನ್ನೂ ಸಹಿತ ಕೇಂದ್ರಸರ್ಕಾರ ನಿಗದಿ ಮಾಡುತ್ತದೆ. ಆದ್ದರಿಂದ ಅವರ ಸಲಹೆಯನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತರುತ್ತೇನೆ.

ತೆರಿಗೆಗಳ ಬಾಕಿಗಳು

೪೩೧. ಶ್ರೀ ಆರ್. ಎನ್. ನಾಯ್ಕ (ಹೊನ್ನಾವರ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತೆ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೮೯-೯೦ನೇ ಸಾಲಿಗೆ ವಿವಿಧ ರೀತಿಯಿಂದ ಎಷ್ಟು ಮೊತ್ತದ ಕರಾಕರಣೆಯು ಗುರಿ ಇಟ್ಟುಕೊಳ್ಳಲಾಗಿತ್ತು ?

ಆ) ಗುರಿ ತಲುಪಿದೆಯೇ ?

ಇ) ಅಬಕಾರಿ ಇಲಾಖೆಯಿಂದ ಎಷ್ಟು ಕರಾಕರಣೆ ಆಗಬೇಕಾದದ್ದು ಬಾಕಿ ಇದೆ ?

(ಗುತ್ತಿಗೆದಾರರ ಪಟ್ಟಿ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು ಯೋಜನೆ, ವಾರ್ತೆ ಮಂತ್ರಿಗಳು).—

ಅ) ಪರಿಷ್ಕೃತ ಆಧಾಯವಿರುವುದರಿಂದ ಅಬಕಾರಿ ಇಲಾಖೆಗೆ ೩೧ನೇ ಮಾರ್ಚಿ ೧೯೯೦ಕ್ಕೆ ಒಟ್ಟು ೩೨೦ ಕೋಟಿ ರೂ.ಗಳು ವಸೂಲಿಯಾಗುವುದೆಂದು ಅಂದಾಜು ಮಾಡಲಾಗಿದೆ.

ಆ) ೧೯೯೦ನೇ ಫೆಬ್ರುವರಿ ಅಂತ್ಯದವರೆಗೆ ೨೯೧ ಕೋಟಿ ರೂ.ಗಳ ವಸೂಲಿಯು ಗುರಿಯನ್ನು ಸಾಧಿಸಲಾಗಿದೆ.

ಇ) ಗುತ್ತಿಗೆಯ ಬಾಡಿಗೆಗಳಲ್ಲಿ ಕಡಿಮೆ ಬೀಳುವುದಿದ್ದಲ್ಲಿ ಅದು ೧೯೮೯-೯೦ನೇ ಸಾಲಿನ ಅಬಕಾರಿ ವರ್ಷವು ಮುಗಿದಮೇಲೆ ತಿಳಿದುಬರುತ್ತದೆ, (ಆದ್ದರಿಂದ ಈ ಹಂತದಲ್ಲಿ ಅಂತಹ ಬಾಡಿಗೆದಾರರ ಪಟ್ಟಿಯನ್ನು ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.)

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ರಾಜ್ಯದಲ್ಲಿ ೧೯೮೯-೯೦ನೇ ಸಾಲಿನಲ್ಲಿ ವಿವಿಧ ರೀತಿಯ ಕರಾಕರಣೆಯ ಗುರಿಯನ್ನು ಇಟ್ಟುಕೊಳ್ಳಲಾಗಿದೆಯೇ, ಹಾಗಿದ್ದರೆ ಎಷ್ಟು ಎಂದು ನಾನು ಪ್ರಶ್ನೆ ಕೇಳಿದ್ದೆ. ಆದರೆ ಉತ್ತರದಲ್ಲಿ ಕೇವಲ ಅಬಕಾರಿ ಇಲಾಖೆಗೆ ಸಂಬಂಧ ಪಟ್ಟ ಉತ್ತರ ಮಾತ್ರ ಕಂಡು ಬರುತ್ತದೆ. ಗುರಿ ತಲುಪಿದೆಯೇ ಎಂಬ ಪ್ರಶ್ನೆ ಕೇಳಿದ್ದೆ, ಅದಕ್ಕೆ ಇಲ್ಲ ಎಂದು ಹೇಳಬಹುದಾಗಿತ್ತು. ಆದರೆ ಇಲ್ಲಿ ಕೊಟ್ಟ ಉತ್ತರದ ಪ್ರಕಾರವೇ ಇನ್ನೂ ಬಹಳಷ್ಟು ಕೋಟಿ ರೂಪಾಯಿಗಳು ವಸೂಲಾಗಿ ಬರುವುದು ಬಾಕಿ ಇದೆ. ಮಾನ್ಯ ಮಂತ್ರಿಗಳ ಹತ್ತಿರ ಉತ್ತರ ಇದ್ದರೆ ಹೇಳಲಿ. ಇಲ್ಲದಿದ್ದರೆ ಇನ್ನೊಮ್ಮೆ ಬೇರೆ ರೂಪದಲ್ಲಿ ಇದನ್ನು ಕೇಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಕೇಳಿದ ಉದ್ದೇಶವನ್ನು ಒಪ್ಪಿಕೊಂಡೇ ಆ ಮತ್ತು ಆ ಪ್ರಶ್ನೆಗೆ ಮಾನ್ಯ ಆರ್ಥಿಕ ಮಂತ್ರಿಗಳು ಉತ್ತರ ಕೊಟ್ಟಿರಬಹುದು. ತಾವು ಪ್ರತ್ಯೇಕವಾಗಿ ಅಬಕಾರಿ ಇಲಾಖೆಗೆ ಎಷ್ಟು, ಬೇರೆ ಬೇರೆ ಇಲಾಖೆಯಿಂದ ಎಷ್ಟು ಎಂದು ಬೇರೆ ಬೇರೆ ಕೇಳಿದ್ದರೆ ಇದನ್ನು ಕೊಡುತ್ತಿದ್ದರು. ಎರಡನೆಯಾಗಿ ಗುರಿ ಮುಟ್ಟುವ ವಿಚಾರದಲ್ಲಿ ಫೆಬ್ರುವರಿವರೆಗೆ ಮಾತ್ರ ಇಲ್ಲಿ ವಿವರವನ್ನು ಕೊಟ್ಟಿದೆ. ಇದರ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಪುನಃ ಸಂಬಂಧ ಪಟ್ಟ ಅಧಿಕಾರಿಗಳ ಸಭೆ ಕರೆದು ೩೨೦ ಕೋಟಿ ರೂಪಾಯಿಗಳಿದ್ದ ಗುರಿಯನ್ನು ೩೩೫ ಕೋಟಿಗೆ ಏರಿಸಿದ್ದಾರೆ. ಅದರ ಅರ್ಥ ಏನೆಂದರೆ, ಗುರಿಯನ್ನು ಮುಟ್ಟುವುದು ಮಾತ್ರವಲ್ಲ, ಅದನ್ನು ಪರಿಷ್ಕರಣ ಮಾಡುವ ಕೆಲಸವನ್ನು ಸಹ ಮಾಡಿದ್ದರಿಂದ ೧೯೮೯-೯೦ ರಲ್ಲಿ ಅಬಕಾರಿ ಇಲಾಖೆಗೆ ಪರಿಷ್ಕೃತ ಗುರಿ ೩೩೫ ಕೋಟಿ ಆಗುತ್ತದೆಂದು ಗುರುತಿಸಿದ್ದಾರೆ. ಆದುದರಿಂದ ಬೇರೆ ಬೇರೆ ಇಲಾಖೆಗಳಿಂದ ಎಷ್ಟೆಷ್ಟು ಮೊತ್ತ ಬರುತ್ತದೆ ಎಂಬ ವಿಚಾರ ಕೇಳುವುದು ಇದ್ದರೆ ಆ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಲಾಗುವುದು.

ಶ್ರೀ ಆರ್. ಎನ್. ನಾಯಕ್.—ನಾನು ಕೇಳಿದ್ದು, ಇಡೀ ರಾಜ್ಯಕ್ಕೆ ವಿವಿಧ ರೀತಿಯಿಂದ ಎಷ್ಟು ಕರಾಕರಣೆಯ ಗುರಿ ಇಟ್ಟುಕೊಳ್ಳಲಾಗಿತ್ತು ಎಂದು. ನನ್ನ ಮೂಲ ಉದ್ದೇಶಕರ ವಸೂಲಾತಿ ರಾಜದಲ್ಲಿ ವ್ಯವಸ್ಥಿತವಾಗಿ ಆಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದು. ಆಗಿರದಿದ್ದರೆ, ಹಿಂದಿನ ಸರಕಾರ ಇದರಲ್ಲಿ ಭಾಗಿಯಾಗಿತ್ತದೆ, ನಮ್ಮ ಸರಕಾರ ಬಂದಮೇಲೆ ಆದೂ ಭಾಗಿಯಾಗುತ್ತದೆ, ಈ ಮಧ್ಯೆ ರಾಜ್ಯ ಪಾಲರ ಆಡಳಿತ ಇದ್ದು ಅದೂ ಭಾಗಿಯಾಗುತ್ತದೆ. ಕರ ವಸೂಲಿ ರಾಜ್ಯಧಲ್ಲಿ ಸರಿಯಾಗಿ ನಡೆದಿದೆಯೇ ಇಲ್ಲವೇ ಎಂಬುದನ್ನು ಪತ್ತೆ ಹಚ್ಚುವ ಸಲುವಾಗಿ ಇದನ್ನು ಕೇಳಿದ್ದೆ. ತಮ್ಮ ಹತ್ತಿರ ವಿವರ ಇದ್ದರೆ ಒಟ್ಟು ಗುರಿ ಎಷ್ಟು, ಎಷ್ಟು ಕರ ವಸೂಲಿಯಾಗಿದೆ. ಎಂತ್ತು ಎಷ್ಟು ಸಾಧಿಸಲಾಗಿದೆ ಎಂಬುದನ್ನು ಹೇಳಿದ್ದರೆ ಚೆನ್ನಾಗಿತ್ತು.....

ಶ್ರೀ ಎಂ. ವೀರಪ್ಪ ಮೊಯಿಲಿ.—ಅಬಕಾರಿ ಗುರಿಯ ಬಗ್ಗೆ ಹೇಳಿದ್ದೇನೆ. ಇದರಲ್ಲಿ ಗುರಿ ಮುಟ್ಟುವುದು ಮಾತ್ರವಲ್ಲ, ಅದಕ್ಕಿಂತ ಹೆಚ್ಚು ಆದಾಯ ಬರುವ ಪರಿಸ್ಥಿತಿ ಇದೆ. ಬೇರೆ ಬೇರೆ ಇಲಾಖೆಯ ಬಗ್ಗೆ ತಾವು ಬೇರೆ ಪ್ರಶ್ನೆ ಕೇಳುವುದು ಒಳ್ಳೆಯದು. ಬಹುಶ: ೨೧ನೇ ತಾರೀಖಿಗೆ ಅಥವಾ ೩೧ನೇ ತಾರೀಖಿಗೆ ತಮ್ಮ ಪ್ರಶ್ನೆಗಳಿಗೆ ಸರಿಯಾದ ಉತ್ತರ ಒದಗಿಸಿಕೊಡಬಹುದು.

ಶ್ರೀ ಆರ್. ಎನ್. ನಾಯಕ್.—ನನಗೆ ಇನ್ನೊಮ್ಮೆ ಅವಕಾಶ ಕೊಡಬೇಕು. ಹೊಸದಾಗಿ ಕೇಳುವುದಕ್ಕೆ ಬದಲು ಇದನ್ನೇ ಮುಂದುವರಿಸಿ ಇನ್ನೊಮ್ಮೆ ಪ್ರಶ್ನೆ ಕೇಳಲು ಅವಕಾಶ ಕೊಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲಿ ಅಬಕಾರಿ ಇಲಾಖೆಗೆ ಸೀಮಿತವಾಗಿ ಉತ್ತರ ಕೊಟ್ಟಿದ್ದೇವೆ. ಇದರ ಬಗ್ಗೆ ಇನ್ನೂ ಬೇರೆ ಬೇರೆ ಖಾತೆಗಳಿಂದ ಹಾಗೂ ಬೇರೆ ಬೇರೆ ಇಲಾಖೆಗಳಿಂದ ಬರಬೇಕಾದ ಆದಾಯದ ಬಗ್ಗೆ ಸನ್ಮಾನ್ಯ ಸದಸ್ಯರು ನಿಯಮ ೩೩ರಲ್ಲಿ ಕೇಳಬಹುದು ಅಥವಾ ೨೧ನೇ ತಾರೀಖು ಅಥವಾ ೩೧ನೇ ತಾರೀಖು ಕಾಲ್ ಅಟೆನ್‌ಕ್ಷನ್ ಪಾಕಿ ಕೇಳಬಹುದು, ಆಗ ಅದಕ್ಕೆ ಸಂಪೂರ್ಣವಾದ ವಿವರಗಳನ್ನು ನಾವು ಒದಗಿಸುತ್ತೇವೆ.

ಅಧ್ಯಕ್ಷರು.—ಸರಿ.

ಪ್ರಶ್ನೆ ಸಂಖ್ಯೆ ೧೫೯ (ಳಖಿಸಿ)

ಶ್ರೀ ಖಿಮರುಲ್ ಇಸ್ಲಾಮ್

(ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು)